## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 160/23

**ಸಾಕ್ಷಿಯನ್ನು ದಿಃ 24.06.2024 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಕುಮಾರ್ | ಸಿ.ಡಬ್ಲ್ಯೂ: 3 | ಪಿ.ಡಬ್ಲ್ಯೂ: 2 |
| ತಂದೆಯ ಹೆಸರು | ರಾಚಪ್ಪ ಶೆಟ್ಟಿ | | |
| ವಯಸ್ಸು | 53 ವರ್ಷ | | |
| ಕೆಲಸ | ಖಾಸಗಿ | | |
| ವಾಸಸ್ಥಳ | ಹುಣಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ಚಾಸಾ-1 ಹಾಗೂ 2 ರವರ ಪರಿಚಯ ಇದೆ. 1 ಹಾಗೂ 2 ನೇ ಆರೋಪಿ ಪರಿಚಯ ಇಲ್ಲ. ಈಗ ನೋಡುತ್ತಿರುವ ದಾಖಲೆಗಳಲ್ಲಿ ನನ್ನ ಸಹಿ ಇದೆ. ದಾಖಲೆ ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು.

2. ನಾನು ರೇಣುಕಾ ಬಾರ್ ನಲ್ಲಿ ಅಡುಗೆ ಕೆಲಸ ಮಾಡುತ್ತಿದ್ದೇ. ದಿಃ 19.09.2022 ರಂದು ಬೆಳಿಗ್ಗೆ 10.15 ರ ಪೊಲೀಸರು ಮಹಜರ್ ಮಾಡಲು ರೇಣುಕಾ ಬಾರ್ ಗೆ ಬಂದಿದ್ದು ಸ್ಥಳವನ್ನು ಚಾಸಾ-1 ರವರು ತೋರಿಸಿಕೊಟ್ಟಿರುತ್ತಾರೆ. ಆ ಸಮಯ ನನ್ನ ಜೊತೆ ಚಾಸಾ-1 ಹಾಗೂ 3 ರವರು ಹಾಜರಿದ್ದರು. ಸದರಿ ಮಹಜರ್ ಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ಮಹಜರ್ ಅನ್ನು ಪೊಲೀಸರು ಬರೆದಿದ್ದು ನಾನು ನೋಡಿ ಸಹಿ ಹಾಕಿರುತ್ತೇನೆ. ಆ ಸಮಯ ಪೊಲೀಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಿ.ಡಿ ಇಲ್ಲದ ಕಾರಣ ಅವುಗಳನ್ನು ನಿಶಾನೆಗೊಳಪಡಿಸಿಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಎನ್ ಪಿ ಅವರಿಂದ-**

3. ಈ ಪ್ರಕರಣದ ಸಂಬಂಧ ನಾನು ಪೊಲೀಸ್ ಠಾಣೆಗೆ ಯಾವತ್ತೂ ಹೋಗಿರುವುದಿಲ್ಲ. ಈ ಪ್ರಕರಣದ ಮಹಜರ್ ಗೆ ಪೊಲೀಸಿನವರು ನನಗೆ ನೋಟೀಸ್ ನೀಡಿರುವುದಿಲ್ಲ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಈ ದಿನ ನುಡಿದಿರುವ ವಿಚಾರಗಳನ್ನು ನಾನು ಸರಕಾರಿ ವಕೀಲರು ಹೇಳಿಕೊಟ್ಟ ಮೇರೆಗೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆದರೆ ವಿಚಾರ ನನಗೆ ಸರಿಯಾಗಿ ಗೊತ್ತಿಲ್ಲ. ನಿಪಿ.2 ರ ಮಹಜರ್ ನಲ್ಲಿ ನಮೂದಿಸಿರುವ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಅದನ್ನು ನನಗೆ ಹೇಳಲು ಆಗುವುದಿಲ್ಲ. ಮಹಜರ್ ನಲ್ಲಿ ಬರೆದಿರುವ ಯಾವುದೇ ವಿಚಾರ ನನಗೆ ಗೊತ್ತಿಲ್ಲ. ಈ ಪ್ರಕರಣದ ಸಂಬಂಧ ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಪೊಲೀಸರು ಹಾಗೂ ಚಾಸಾ-1 ರವರ ಹೇಳಿಕೆ ಮೇರೆಗೆ ನಾನು ಈ ದಿನ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಹಿ ಮಾಡಲು ಬನ್ನಿ ಎಂದು ಕರೆದ ಮೇರೆಗೆ ನಾನು ಸಹಿ ಮಾಡಿರುವುದನ್ನು ಹೊರತುಪಡಿಸಿ ನನಗೆ ಈ ಪ್ರಕರಣದ ಯಾವುದೇ ವಿಚಾರ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.